# ನಿರ್ಮಲ ಭಾರತ್ ಅಭಿಯಾನ

**ದಿನಾಂಕ 08.02.2013 ರಂದು ನಡೆದ ಎಲ್ಲಾ ಜಿಲ್ಲೆಯ ನಿರ್ಮಲ ಭಾರತ್ ಅಭಿಯಾನ ಕಾರ್ಯಕ್ರಮದ ನೋಡಲ್ ಅಧಿಕಾರಿಗಳು, ರಾಜ್ಯ ಸಮಾಲೋಚಕರು ಹಾಗೂ ಜಿಲ್ಲಾ ಸಮಾಲೊಚಕರೊಂದಿಗೆ 2013-14ನೇ ವಾರ್ಷಿಕ ಅನುಷ್ಠಾನ ಕ್ರಿಯಾಯೋಜನೆಯ(AIP) ಬಗ್ಗೆ ಹಾಗೂ ಪ್ರಗತಿ ಪರಿಶೀಲನಾ ಸಭೆಯನ್ನು ಅಪರ ನಿರ್ದೇಶಕರು (ನೀ&ನೈ) ಇವರು ನಡೆಸಿದ ಸಭೆಯ ನಡವಳಿಗಳು**.

ಅಪರ ನಿರ್ದೇಶಕರು (ನೀ&ನೈ), ರಾಜ್ಯ ನೀರು ಮತ್ತು ನೈರ್ಮಲ್ಯ ಮಿಷನ್ ಹಾಗೂ ನಿರ್ಮಲ ಭಾರತ್ ಅಭಿಯಾನ ಇವರು ರಾಜ್ಯದ ಎಲ್ಲಾ ಜಿಲ್ಲೆಗಳಂದ ಆಗಮಿಸಿದ್ದ ನೋಡಲ್ ಅಧಿಕಾರಿಗಳನ್ನು, ರಾಜ್ಯಮಟ್ಟದ ಸಮಾಲೋಚಕರನ್ನು ಹಾಗೂ ಜಿಲ್ಲಾ ಮಟ್ಟದ ಸಮಾಲೋಚಕರನ್ನು ಸ್ವಾಗತಿಸಿ ವಿಷಯಸೂಚಿಯ ಪ್ರಕಾರ ಸಭೆಯನ್ನು ಆರಂಭಿಸಿದರು.

**ಸಭೆಯಲ್ಲಿ ಮೊದಲಿಗೆ ಚರ್ಚಿಸಿದ ವಿಷಯಗಳು:-**

ಎಲ್ಲಾ ಜಿಲ್ಲಾ ನೋಡಲ್ ಅಧಿಕಾರಿಗಳಿಗೆ ಹಾಗೂ ಜಿಲ್ಲಾ ಮಟ್ಟದ ಸಮಾಲೋಚಕರಿಗೆ ಆನ್‌ಲೈನ್‌ನಲ್ಲಿ ತಪ್ಪಾಗಿ ದಾಖಲಿಸಿರುವ ಆರ್ಥಿಕ ಮತ್ತು ಭೌತಿಕ ವ್ಯತ್ಯಾಸಗಳನ್ನು ಸರಿಪಡಿಸುವಂತೆ ತಿಳಿಸಿದರು. ರಾಜ್ಯ ಕಛೇರಿಯಿಂದ ಬಿಡುಗಡೆಯಾದ ಅನುದಾನವನ್ನು ಗ್ರಾಮ ಪಂಚಾಯತಿಗಳಿಗೆ ಬಿಡುಗಡೆ ಮಾಡುವಾಗ ಜಿಲ್ಲಾ ಪಂಚಾಯತಿಗಳು ನೇರವಾಗಿ ಗ್ರಾಮ ಪಂಚಾಯತಿಗಳಿಗೆ ಬಿಡುಗಡೆ ಮಾಡುವುದು. ತಾಲ್ಲೂಕು ಪಂಚಾಯತಿಗಳಿಗೆ ಬಿಡುಗಡೆ ಮಾಡುವ ಪದ್ಧತಿಯನ್ನು ಕೈಬಿಡುವಂತೆ ಸೂಚಿಸಿದರು. ಜಿಲ್ಲಾ ಪಂಚಾಯತಿಯಿಂದ ಗ್ರಾಮ ಪಂಚಾಯತಿಗಳಿಗೆ ಬಿಡುಗಡೆ ಮಾಡುತ್ತಿರುವ ಅನುದಾನವನ್ನು ಯಾವ ಬಳಕೆಗಾಗಿ ಬಿಡುಗಡೆ ಮಾಡಲಾಗುತ್ತಿದೆ ಎಂಬುದರ ಬಗ್ಗೆ ಸ್ಪಷ್ಟಪಡಿಸಿ ಆ ಅನುದಾನ ಕೇಂದ್ರದ ಪಾಲಿನದ್ದೆ ಅಥವಾ ರಾಜ್ಯ ಪಾಲಿನದ್ದೆ ಎಂದು ವಿವರಿಸಿ ಬಿಡುಗಡೆ ಮಾಡುವುದು ಹಾಗೂ ಗ್ರಾಮ ಪಂಚಾಯತಿಗಳು ವೆಚ್ಚ ಮಾಡಿರುವುದಕ್ಕೆ ವಿವರವನ್ನು ಪಡೆಯುವುದು. ಇದು ರಾಜ್ಯಾದಾದ್ಯಂತ ಒಂದೇ ರೀತಿಯ ಪದ್ಧತಿಯಿರುವುದು ಸೂಕ್ತವೆಂದು ತಿಳಿಸಿದರು.

ಚಿಕ್ಕಬಳ್ಳಾಪುರ ಹಾಗೂ ಯಾದಗಿರಿ ಜಿಲ್ಲೆಯವರು ಪ್ರತ್ಯೇಕವಾಗಿ ಆನ್‌ಲೈನ್‌ಗೆ ಎಂಟ್ರಿಮಾಡಲು ಪಾಸ್‌ವರ್ಡ್ ಸಮಸ್ಯೆ ಇರುವುದಾಗಿ ತಿಳಿಸಿದ್ದರಿಂದ ಅಪರ ನಿರ್ದೇಶಕರೊಂದಿಗೆ ಚರ್ಚಿಸಿ ಕ್ರಮ ಕೈಗೊಳ್ಳಲು ಸೂಚಿಸಿದರು. ಆನ್‌ಲೈನ್ ಎಂಟ್ರಿ ಮಾಡುವಾಗ ಗುಲ್ಬರ್ಗ & ಯಾದಗಿರಿ ಹಾಗೂ ಕೋಲಾರ & ಚಿಕ್ಕಬಳ್ಳಾಪುರ ಜಿಲ್ಲೆಯವರು ಒಟ್ಟಾಗಿ ಕುಳಿತು ರಿಕನ್ಸಿಲೇಷನ್ ಮಾಡಿದ ನಂತರವೇ ಆನ್‌ಲೈನ್‌ಗೆ ಎಂಟ್ರಿ ಮಾಡಲು ಸೂಚಿಸಿದರು. ಈ ಸಮಸ್ಯೆಯನ್ನು ಇನ್ನು ಮುಂದೆ ಬರುವ ಸಭೆಗಳಲ್ಲಿ ತರಬಾರದು ಎಂಬುದಾಗಿ ತಿಳಿಸಿದರು.

**<u>ಜಿಲ್ಲೆಗಳಿಂದ ಬಂದಿರುವ 2013-14ನೇ ವಾರ್ಷಿಕ ಅನುಷ್ಠಾನ ಕ್ರಿಯಾಯೋಜನೆಯ ಬಗ್ಗೆ:</u>**

1. **<u>ಬಾಗಲಕೋಟೆ:-</u>** 2013-14ನೇ ಸಾಲಿಗೆ ತೆಗೆದುಕೊಂಡಿರುವ ಗುರಿಯನ್ನು ಪರಿಶೀಲಿಸಿ ನಂತರ ಬಿಡುಗಡೆಯಾದ ಅನುದಾನದಲ್ಲಿ ವೆಚ್ಚವಾಗಿ ಉಳಿಕೆ ರೂ.60.00 ಲಕ್ಷಗಳು ಇರುವುದನ್ನು ತಿಳಿಸಿದರು. ಸಮುದಾಯ ಶೌಚಾಲಯಗಳ ನಿರ್ಮಾಣಕ್ಕೆ 60 ಗುರಿಯನ್ನು ತೆಗೆದುಕೊಂಡಿರುವುದರಿಂದ ಅಪರ ನಿರ್ದೇಶಕರು ನಿಮ್ಮ ಜಿಲ್ಲೆಯಲ್ಲಿ ಜಾಗವಿದ್ದರೆ ಮಾತ್ರ 60 ಗುರಿಯನ್ನು ಹೊಂದಬಹುದು ಇಲ್ಲವೆ ಈಗಲೇ ಪರಿಷ್ಕೃತ ಮಾಡಬಹುದು ಎಂದು ತಿಳಿಸಿದರು.
2. **<u>ಬೆಂಗಳೂರು ಗ್ರಾಮಾಂತರ:-</u>** ಬೆಂಗಳೂರು ಗ್ರಾಮಾಂತರ ಜಿಲ್ಲೆಯಿಂದ ನೋಡಲ್ ಅಧಿಕಾರಿಗಳು ಸಭೆಗೆ ಹಾಜರಾಗದೇ ಇರಲು ಕಾರಣವನ್ನು ಕೇಳಿ ಇನ್ನು ಮುಂದೆ ಈ ರೀತಿ ಆದರೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು. ನಂತರ 2013-14ನೇ ಸಾಲಿನ ಎಐಪಿಯನ್ನು ಪರಿಶೀಲಿಸಿದರು ಸರಿಯಾದ ರೀತಿಯಲ್ಲಿ ಗುರಿಯನ್ನು ನಿಗಧಿಪಡಿಸಬೇಕೆಂದು ತಿಳಿಸಿ ಇನ್ನು ಮುಂದೆ ನೀವು ಸಭೆಗೆ ಹಾಜರಾಗುವಾಗ ಸರಿಯಾದ ಮಾಹಿತಿಯೊಂದಿಗೆ ಸಭೆಗೆ ಹಾಜರಾಗಬೇಕೆಂದು ತಿಳಿಸಿದರು.
3. **<u>ಬೆಂಗಳೂರು ನಗರ:-</u>** ಜಿಲ್ಲೆಯ ಪ್ರಗತಿಯನ್ನು ಪರಿಶೀಲಿಸಿದ ನಂತರ ಇವರಿಗೆ 2013-14ನೇ ಸಾಲಿಗೆ ನಿಗಧಿಪಡಿಸಿದ ಗುರಿಯನ್ನು ಸಾಧಿಸುವ ಪ್ರಗತಿಗೆ ಅನುಗುಣವಾಗಿ ನಿಗಧಿಪಡಿಸಬೇಕೆಂದು ತಿಳಿಸಿದರು. ಆನ್‌ಲೈನ್‌ನಲ್ಲಿ ಜಿಲ್ಲೆಯ ಅನುದಾನದಲ್ಲಿ ತುಂಬಾ ವ್ಯತ್ಯಾಸಗಳಿರುವುದರಿಂದ ಆನ್‌ಲೈನ್ ಬಗ್ಗೆ ಚರ್ಚಿಸಲು ಒಂದು ದಿನ ಕೇಂದ್ರ ಕಛೇರಿಗೆ ಬರಬೇಕೆಂದು ತಿಳಿಸಿದರು ಹಾಗೂ ಕೇಂದ್ರ ಮತ್ತು ರಾಜ್ಯದ ಅನುದಾನದ ಬಗ್ಗೆ ಚರ್ಚೆನಡೆಸಿದರು. ಈ ಜಿಲ್ಲೆಯಲ್ಲಿ ಆನ್‌ಲೈನ್ ಅಪ್‌ಡೇಟ್ ಬಗ್ಗೆ ಸಮಸ್ಯೆಗಳನ್ನು ವ್ಯಕ್ತಪಡಿಸಿದರು.
4. **<u>ಬೆಳಗಾಂ:-</u>** 2013-14ನೇ ಸಾಲಿನ ಎಐಪಿಯನ್ನು ಪರಿಶೀಲಿಸಿ ನಿಗಧಿಪಡಿಸಿರುವ ಗುರಿಯನ್ನು ಸಾಧಿಸುವಂತೆ ತಿಳಿಸಿದರು. ಜಿಲ್ಲೆಯಲ್ಲಿ ಬಿಡುಗಡೆಯಾದ ಅನುದಾನಲ್ಲಿ ವೆಚ್ಚ ಮಾಡಿ ಇನ್ನೂ ರೂ.103.18 ಲಕ್ಷಗಳು ಬಾಕಿ ಉಳಿದಿದ್ದು ಈ ಹಣವನ್ನು ಕೂಡಲೇ ಖರ್ಚು ಮಾಡಲು ಸೂಚಿಸಿದರು.
5. **<u>ಬಳ್ಳಾರಿ:-</u>** 2013-14ನೇ ಸಾಲಿಗೆ ನಿಗಧಿಪಡಿಸಿರುವ ಗುರಿಯನ್ನು ಪರಿಶೀಲಿಸಿ ಸಾಧನೆಯು 2012-13ನೇ ಸಾಲಿನಲ್ಲಿ ಪ್ರಗತಿ ಕಡಿಮೆ ಇರುವುದರಿಂದ ಈಗ ನಿಗಧಿಪಡಿಸಿರುವ ಗುರಿಯನ್ನು ಪರಿಷ್ಕೃತ ಮಾಡುವಂತೆ ಸೂಚಿಸಿದರು. ಜಿಲ್ಲೆಯಲ್ಲಿ ಬಿಡುಗಡೆಯಾದ ಅನುದಾನದಲ್ಲಿ ವೆಚ್ಚ ಮಾಡಿ ಬಾಕಿ ರೂ.372.03 ಲಕ್ಷಗಳು ಉಳಿದಿದ್ದು ಇದನ್ನು ಖರ್ಚು ಮಾಡಲು ಸೂಕ್ತ ಕ್ರಮವಹಿಸುವಂತೆ ತಿಳಿಸಿದರು. ಮುಖ್ಯವಾಗಿ ಎಲ್ಲಾ ಜಿಲ್ಲೆಯಲ್ಲಿ ಲಭ್ಯವಿರುವ ಅನುದಾನದಲ್ಲಿ ಶೇ.60% ರಷ್ಟು ಪ್ರಗತಿ

ಇದ್ದರೆ ಮಾತ್ರ 2ನೇ ಕಂತಿನ ಅನುದಾನವನ್ನು ಕೇಂದ್ರ ಸರ್ಕಾರ ಬಿಡುಗಡೆ ಮಾಡುವುದಾಗಿ ತಿಳಿಸಿದರು.

6. **<u>ಬೀದರ್:-</u>** 2013-14ನೇ ಸಾಲಿಗೆ ನಿಗಧಿಪಡಿಸಿರುವ ಗುರಿಯನ್ನು ಪರಿಶೀಲಿಸಿ ಸಾಧನೆಯು 2012-13ನೇ ಸಾಲಿನಲ್ಲಿ ಪ್ರಗತಿ ಕಡಿಮೆ ಇರುವುದರಿಂದ ಈಗ ನಿಗಧಿಪಡಿಸಿರುವ ಗುರಿಯನ್ನು ಪರಿಷ್ಕೃತ ಮಾಡುವಂತೆ ಸೂಚಿಸಿದರು. ಜಿಲ್ಲೆಯಲ್ಲಿ ಬಿಡುಗಡೆಯಾದ ಅನುದಾನದಲ್ಲಿ ವೆಚ್ಚ ಮಾಡಿ ರೂ.511.99 ಲಕ್ಷಗಳು ಉಳಿದಿದ್ದು ಇದನ್ನು ಖರ್ಚು ಮಾಡಲು ಸೂಕ್ತ ಕ್ರಮವಹಿಸುವಂತೆ ತಿಳಿಸಿದರು.

7. **<u>ಬಿಜಾಪುರ:-</u>** 2013-14ನೇ ಸಾಲಿಗೆ ನಿಗಧಿಪಡಿಸಿರುವ ಗುರಿಯನ್ನು ಪರಿಶೀಲಿಸಿ ಗುರಿಯನ್ನು ಪರಿಷ್ಕೃತ ಮಾಡುವಂತೆ ಸೂಚಿಸಿದರು. ಜಿಲ್ಲೆಯಲ್ಲಿ ಬಿಡುಗಡೆಯಾದ ಅನುದಾನದಲ್ಲಿ ವೆಚ್ಚ ಮಾಡಿ ರೂ.701.58 ಲಕ್ಷಗಳು ಉಳಿದಿದ್ದು ಇದನ್ನು ಖರ್ಚು ಮಾಡಲು ಸೂಕ್ತ ಕ್ರಮವಹಿಸುವಂತೆ ತಿಳಿಸಿದರು. ಮುಖ್ಯವಾಗಿ ಜಿಲ್ಲೆಯವರಿಗೆ ಶೇ.60% ರಷ್ಟು ಪ್ರಗತಿ ಇದ್ದರೆ ಮಾತ್ರ 2ನೇ ಕಂತಿನ ಅನುದಾನವನ್ನು ಕೇಂದ್ರ ಸರ್ಕಾರ ಬಿಡುಗಡೆ ಮಾಡುವುದಾಗಿ ತಿಳಿಸಿದರು.

8. **<u>ಚಾಮರಾಜನಗರ:-</u>** 2012-13ನೇ ಸಾಲಿನಲ್ಲಿ 19854 ಗುರಿಯನ್ನು ಹೊಂದಿದ್ದು ಇದುವರೆಗೆ 5723ರಷ್ಟು ಮಾತ್ರ ಪ್ರಗತಿಯನ್ನು ಸಾಧಿಸಿರುವುದು ತೀರ ನೀರಾಶಾದಾಯಕವಾಗಿದೆ ಎಂದು ತಿಳಿಸಿದರು ಹಾಗೂ 2013-14ನೇ ಸಾಲಿಗೆ ನಿಗಧಿಪಡಿಸಿರುವ ಗುರಿಯನ್ನು ಪರಿಷ್ಕೃತ ಮಾಡಿಕೊಡುವುದಾಗಿ ತಿಳಿಸಿದರು. ಜಿಲ್ಲೆಯಲ್ಲಿ ಸಮುದಾಯ ಶೌಚಾಲಯಗಳನ್ನು ನಿರ್ಮಿಸುವ ಬಗ್ಗೆ ಚರ್ಚಿಸಿದರು ಹಾಗೂ ಅವುಗಳನ್ನು ಸರಿಯಾದ ರೀತಿಯಲ್ಲಿ ಸಂರಕ್ಷಣೆಯನ್ನು ಮಾಡಲು ಸೂಚಿಸಿದರು. ಮತ್ತು ಐಇಸಿ ಚುಟುವಟಿಕೆಗಳನ್ನು ಹಮ್ಮಿಕೊಂಡು ಪ್ರಗತಿಯನ್ನು ಸಾಧಿಸಲು ತಿಳಿಸಿದರು. ಘನ ಮತ್ತು ದ್ರವತ್ಯಾಜ್ಯ ನಿರ್ವಹಣೆಯ ಬಗ್ಗೆ ಚರ್ಚಿಸಿದರು.

9. **<u>ರಾಮನಗರ:-</u>** ಇವರು 2013-14ನೇ ಸಾಲಿಗೆ ಹೆಚ್ಚು ಗುರಿಯನ್ನು ತೆಗೆದುಕೊಂಡಿದ್ದು ಪ್ರಗತಿಯನ್ನು ಸಾಧಿಸಲು ಸಾಧ್ಯವಾಗುತ್ತದೆಯೇ ಎಂದು ಕೇಳಿದಾಗ ಅವರು ಸಾಧಿಸುತ್ತೇವೆ ಎಂಬುದಾಗಿ ಭರವಸೆ ನೀಡಿಲಾಗಿ ಜಿಲ್ಲೆಯಲ್ಲಿ ಅನುದಾನ ಉಳಿಕೆ ರೂ.230.77 ಇರುವುದಾಗಿ ತಿಳಿಸಿದರು. ಜಿಲ್ಲೆಗೆ 2ನೇ ಕಂತಿನ ಅನುದಾನವನ್ನು ಬಿಡುಗಡೆ ಮಾಡಲು ಶೇ.60% ರಷ್ಟು ಪ್ರಗತಿ ಇದ್ದರೆ ಮಾತ್ರ ಸಾಧ್ಯವೆಂದು ತಿಳಿಸಿದರು.

10. **<u>ಚಿಕ್ಕಮಗಳೂರು:-</u>** 2013-14ನೇ ಸಾಲಿಗೆ ನಿಗಧಿಪಡಿಸಿರುವ ಗುರಿಯನ್ನು ಪರಿಶೀಲಿಸಿ ಗುರಿಯನ್ನು ಪರಿಷ್ಕೃತ ಮಾಡುವಂತೆ ಸೂಚಿಸಿದರು. ಈ ಜಿಲ್ಲೆಯು ಪ್ರವಾಸಿಗರ ತಾಣವಾಗಿರುವುದರಿಂದ ಸಮುದಾಯ ಶೌಚಾಲಯಗಳನ್ನು ನಿರ್ಮಿಸಬಹುದು ಹಾಗೂ ಘನ ಮತ್ತು ದ್ರವತ್ಯಾಜ್ಯ ನಿರ್ವಹಣೆಯನ್ನು ಮಾಡಬಹುದು ಎಂದು ತಿಳಿಸಿದರು. ಜಿಲ್ಲೆಯಲ್ಲಿ ಅನುದಾನ ಉಳಿಕೆ

ರೂ.230.77 ಇರುವುದಾಗಿ ತಿಳಿಸಿದರು. ನಿಮ್ಮ ಜಿಲ್ಲೆಗೆ 2ನೇ ಕಂತಿನ ಅನುದಾನವನ್ನು ಬಿಡುಗಡೆ ಮಾಡಲು ಶೇ.60% ರಷ್ಟು ಪ್ರಗತಿ ಇದ್ದರೆ ಮಾತ್ರ ಸಾಧ್ಯವೆಂದು ತಿಳಿಸಿದರು.

11. **ಚಿಕ್ಕಬಳ್ಳಾಪುರ:-** 2013-14ನೇ ಸಾಲಿಗೆ ನಿಗಧಿಪಡಿಸಿರುವ ಗುರಿಯನ್ನು ಪರಿಶೀಲಿಸಿ ಹೆಚ್ಚು ಗುರಿಯನ್ನು ನಿಗಧಿಪಡಿಸಿರುವುದರಿಂದ ಪರಿಷ್ಕೃತ ಮಾಡುವಂತೆ ತಿಳಿಸಿದಾಗ ಜಿಲ್ಲೆಯ ನೋಡಲ್ ಅಧಿಕಾರಿಗಳು ಈಗ ತಾವು ನಿಗಧಿಪಡಿಸಿರುವ ಗುರಿಯನ್ನು ಸಾಧಿಸುತ್ತೇವೆ ಎಂಬುದಾಗಿ ತಿಳಿಸಿದರು. ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳನ್ನು ರಿಕನ್ಸಿಲೇಷನ್ ಮಾಡಿಕೊಂಡು ನಂತರ ಆನ್‌ಲೈನ್‌ಗೆ ಅಪ್‌ಲೋಡ್ ಮಾಡಲು ತಿಳಿಸಿದರು.

12. **ಚಿತ್ರದುರ್ಗ:-** 2013-14ನೇ ಸಾಲಿಗೆ ನಿಗಧಿಪಡಿಸಿರುವ ಗುರಿಯನ್ನು ಪರಿಶೀಲಿಸಿ ಗುರಿಯನ್ನು ಸಾಧಿಸುವ ಬಗ್ಗೆ ಕೇಳಿದಾಗ ಸಾಧಿಸುತ್ತೇವೆಂದು ಭರವಸೆ ನೀಡದರು. ಹಾಗೂ ಚಿತ್ರದುರ್ಗ ಪ್ರವಾಸಿಗರ ತಾಣವಾಗಿರುವುದರಿಂದ ಸಮುದಾಯ ಶೌಚಾಲಯಗಳನ್ನು ನಿರ್ಮಿಸಿ ಅವುಗಳನ್ನು ಸಂರಕ್ಷಣೆ ಮಾಡಬೇಕು ಎಂಬುದಾಗಿ ತಿಳಿಸಿದರು. ಜಿಲ್ಲೆಗೆ ಬಿಡುಗಡೆಯಾದ ಅನುದಾನದಲ್ಲಿ ವೆಚ್ಚ ಮಾಡಿ ರೂ.300.97 ಲಕ್ಷಗಳು ಉಳಿದಿದ್ದು ಇದನ್ನು ಖರ್ಚು ಮಾಡಲು ಸೂಕ್ತ ಕ್ರಮವಹಿಸುವಂತೆ ತಿಳಿಸಿದರು.

13. **ಮೈಸೂರು:-** 2012-13ನೇ ಸಾಲಿನಲ್ಲಿ 22282 ಗುರಿಯನ್ನು ಹೊಂದಿದ್ದು ಕೇವಲ 5505ರಷ್ಟು ಪ್ರಗತಿಯನ್ನು ಸಾಧಿಸಿ 2013-14ನೇ ಸಾಲಿಗೆ ಎಐಪಿಯ ಗುರಿ 51145ನ್ನು ಯಾವ ಅಂದಾಜಿನ ಮೇಲೆ ಮಾಡಲಾಗಿದೆ ಎಂದು ಪ್ರಶ್ನಿಸಿದಾಗ ಎಐಪಿಯನ್ನು ಪರಿಷ್ಕೃತ ಮಾಡುವುದಾಗಿ ತಿಳಿಸಿದರು. ಜಿಲ್ಲೆಯಲ್ಲಿ ಶಾಲೆ -84, ಅಂಗನವಾಡಿ-217 ಹಾಗೂ ಘನ ಮತ್ತು ದ್ರವತ್ಯಾಜ್ಯ ನಿರ್ವಹಣೆ - 14ರಷ್ಟು ಗುರಿಯನ್ನು ಹಾಕಿರುವುದರಿಂದ ಅಸಾಧ್ಯವೆಂದು ಗಮನಿಸಿ ಜಿಲ್ಲೆಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳೊಂದಿಗೆ ಚರ್ಚಿಸಿ ಗುರಿಯನ್ನು ನಿಗಧಿಪಡಿಸಬೇಕೆಂದು ತಿಳಿಸಿದರು. ಜಿಲ್ಲೆಗೆ ಬಿಡುಗಡೆಯಾದ ಅನುದಾನದಲ್ಲಿ ವೆಚ್ಚ ಮಾಡಿ ರೂ.789.49 ಲಕ್ಷಗಳು ಉಳಿದಿದ್ದು ಇದನ್ನು ಖರ್ಚು ಮಾಡಲು ಸೂಕ್ತ ಕ್ರಮವಹಿಸುವಂತೆ ತಿಳಿಸಿದರು. ಜಿಲ್ಲೆಗೆ 2ನೇ ಕಂತಿನ ಅನುದಾನವನ್ನು ಬಿಡುಗಡೆ ಮಾಡಲು ಶೇ.60% ರಷ್ಟು ಪ್ರಗತಿ ಇದ್ದರೆ ಮಾತ್ರ ಸಾಧ್ಯವೆಂದು ತಿಳಿಸಿದರು.

14. **ದಾವಣಗೆರೆ:-** 2013-14ನೇ ಸಾಲಿನ ಎಐಪಿಯನ್ನು ಪರಿಶೀಲಿಸಿ ನಿಗಧಿಪಡಿಸಿರುವ ಗುರಿಯನ್ನು ಸಾಧಿಸುವಂತೆ ತಿಳಿಸಿದರು. ಜಿಲ್ಲೆಯ ಘನ ಮತ್ತು ದ್ರವತ್ಯಾಜ್ಯ ನಿರ್ವಹಣೆಯ ಗುರಿಯು 40 ಆಗಿದ್ದು ಇದನ್ನು ಮಾಡುವುದಾಗಿ ಭರವಸೆ ನೀಡಲಾಯಿತು. ಜಿಲ್ಲೆಗೆ ಬಿಡುಗಡೆಯಾದ ಅನುದಾನದಲ್ಲಿ ವೆಚ್ಚ ಮಾಡಿ ರೂ.177.94 ಲಕ್ಷಗಳು ಉಳಿದಿದ್ದು ಇದನ್ನು ಖರ್ಚು ಮಾಡಲು ಸೂಕ್ತ ಕ್ರಮವಹಿಸುವಂತೆ ತಿಳಿಸಿದರು.

15. **ಧಾರವಾಡ:-** 2013-14ನೇ ಸಾಲಿನ ಎಐಪಿಯನ್ನು ಪರಿಶೀಲಿಸಿ ನಿಗಧಿಪಡಿಸಿರುವ ಗುರಿಯನ್ನು ಸಾಧಿಸುವಂತೆ ತಿಳಿಸಿದರು. ಜಿಲ್ಲೆಗೆ ಬಿಡುಗಡೆಯಾದ ಅನುದಾನದಲ್ಲಿ ವೆಚ್ಚ ಮಾಡಿ ರೂ.151.18 ಲಕ್ಷಗಳು ಉಳಿದಿದ್ದು ಇದನ್ನು ಖರ್ಚು ಮಾಡಲು ಸೂಕ್ತ ಕ್ರಮವಹಿಸುವಂತೆ ತಿಳಿಸಿದರು.

16. **ಗದಗ:-** 2013-14ನೇ ಸಾಲಿನ ಎಐಪಿಯನ್ನು ಪರಿಶೀಲಿಸಿ ನಿಗಧಿಪಡಿಸಿರುವ ಗುರಿಯನ್ನು ಸಾಧಿಸುವಂತೆ ತಿಳಿಸಿದರು. ಜಿಲ್ಲೆಗೆ ಬಿಡುಗಡೆಯಾದ ಅನುದಾನದಲ್ಲಿ ವೆಚ್ಚ ಮಾಡಿ ರೂ.308.95 ಲಕ್ಷಗಳು ಉಳಿದಿದ್ದು ಇದನ್ನು ಖರ್ಚು ಮಾಡಲು ಸೂಕ್ತ ಕ್ರಮವಹಿಸುವಂತೆ ತಿಳಿಸಿದರು.

17. **ಗುಲ್ಬರ್ಗ:-** 2012-13ನೇ ಸಾಲಿನಲ್ಲಿ 49064 ಗುರಿಯನ್ನು ಹೊಂದಿದ್ದು ಕೇವಲ 9097ರಷ್ಟು(ಗುಲ್ಬರ್ಗ & ಯಾದಗಿರಿ ಈ ಎರಡು ಜಿಲ್ಲೆಗಳು ಸೇರಿ) ಪ್ರಗತಿಯನ್ನು ಸಾಧಿಸಿ 2013-14ನೇ ಸಾಲಿಗೆ ಎಐಪಿಯ ಗುರಿ 23000ನ್ನು ಯಾವ ಅಂದಾಜಿನ ಮೇಲೆ ಮಾಡಲಾಗಿದೆಯೆಂದು ವಿಚಾರಿಸಲಾಗಿ ನಂತರ ಎಐಪಿಯನ್ನು ಪರಿಷ್ಕೃತ ಮಾಡಿಕೊಳ್ಳಲು ತಿಳಿಸಿದರು. ರಾಜ್ಯ ಸಮಾಲೋಚಕರಾದ ಅನ್ನಪೂರ್ಣ ಎಂ. ಉಪ್ಪಿನ್ ಇವರಿಗೆ ಈ ಗುರಿಯನ್ನು ಸರಿಪಡಿಸಿಕೊಂಡು ಹಾಗೂ ಪ್ರಗತಿಯನ್ನು ಸರಿಯಾದ ರೀತಿಯಲ್ಲಿ ಆನ್‌ಲೈನ್‌ಗೆ ಎಂಟ್ರಿಮಾಡಲು ತಿಳಿಸಿ ಇನ್ನು ಮುಂದೆ ಈ ಸಮಸ್ಯೆಗಳು ಬಂದರೇ ಶ್ರೀಮತಿ ಅನ್ನಪೂರ್ಣ ಎಂ. ಉಪ್ಪಿನ್ ಜವಾಬ್ದಾರರು ಎಂದು ತಿಳಿಸಲಾಯಿತು.

18. **ಹಾಸನ:-** 2013-14ನೇ ಸಾಲಿನ ಎಐಪಿಯನ್ನು ಪರಿಶೀಲಿಸಿ ನಿಗಧಿಪಡಿಸಿರುವ ಗುರಿಯನ್ನು ಸಾಧಿಸುವಂತೆ ತಿಳಿಸಿದರು. ಹಾಸನ ಜಿಲ್ಲಾ ಪಂಚಾಯತಿಗೆ ಹೆಚ್ಚುವರಿಯಾಗಿ ರೂ.50.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿರುತ್ತದೆ ಆದ್ದರಿಂದ ಈ ಹಣವನ್ನು ಕೇಂದ್ರ ಕಛೇರಿಗೆ ಮರುಪಾವತಿ ಮಾಡಲು ತಿಳಿಸಲಾಗಿ ಜಿಲ್ಲೆಗೆ ಸಂಬಂಧಪಟ್ಟ ನೋಡಲ್ ಅಧಿಕಾರಿಗಳು ರಾಜ್ಯ ಕಛೇರಿಯಿಂದ 2ನೇ ಕಂತಿನ ಹಣವನ್ನು ಬಿಡುಗಡೆ ಮಾಡುವಾಗ ಅದನ್ನು ಕಳೆದು ಉಳಿದ ಅನುದಾವನ್ನು ತಮ್ಮ ಜಿಲ್ಲೆಗೆ ಬಿಡುಗಡೆ ಮಾಡಬೇಕೆಂದು ಕೋರಿದರು.

19. **ಹಾವೇರಿ:-** 2013-14ನೇ ಸಾಲಿನ ಎಐಪಿಯನ್ನು ಪರಿಶೀಲಿಸಿ ನಿಗಧಿಪಡಿಸಿರುವ ಗುರಿಯನ್ನು ಸಾಧಿಸುವಂತೆ ತಿಳಿಸಿದರು ಹಾಗೂ ಸಮುದಾಯ ಶೌಚಾಲಯದ ಗುರಿಯನ್ನು ಪರಿಷ್ಕೃತ ಮಾಡಬೇಕೆಂದು ತಿಳಿಸಿದರು.

20. **ಕೊಡಗು:-** 2013-14ನೇ ಸಾಲಿನ ಎಐಪಿಯನ್ನು ಪರಿಶೀಲಿಸಿ ನಿಗಧಿಪಡಿಸಿರುವ ಗುರಿಯನ್ನು ಸಾಧಿಸುವಂತೆ ತಿಳಿಸಿದರು. ಜಿಲ್ಲೆಗೆ ಸಂಬಂಧಪಟ್ಟ ಸಮಾಲೋಚಕರು ಪಿಐಪಿಯು ಪರಿಷ್ಕೃತ ಮಾಡಲು ತಯಾರಿ ನಡೆಯುತ್ತಿದೆ ಎಂಬುದಾಗಿ ತಿಳಿಸಿದರು. ನಿಮ್ಮ ಜಿಲ್ಲೆಗೆ 2ನೇ ಕಂತಿನ ಅನುದಾನವನ್ನು ಬಿಡುಗಡೆ ಮಾಡಲು ಶೇ.60% ರಷ್ಟು ಪ್ರಗತಿ ಇದ್ದರೆ ಮಾತ್ರ ಸಾಧ್ಯವೆಂದು ತಿಳಿಸಿದರು.

21. **ಕೋಲಾರ:-** 2013-14ನೇ ಸಾಲಿಗೆ ನಿಗಧಿಪಡಿಸಿರುವ ಗುರಿಯನ್ನು ಪರಿಶೀಲಿಸಿ ಗುರಿಯನ್ನು ಪರಿಷ್ಕೃತ ಮಾಡುವಂತೆ ಸೂಚಿಸಿದರು. ಕೋಲಾರ ಜಿಲ್ಲೆಯವರಿಂದ ಪ್ರಗತಿಯನ್ನು ಸಾಧಿಸಲು ಯಾವುದೇ ಉತ್ತರ ಬಾರದೇ ಇದ್ದುದರಿಂದ ಸರಿಯಾದ ಮಾಹಿತಿಯೊಂದಿಗೆ ಸಭೆಗೆ ಹಾಜರಾಗುವಂತೆ ತಿಳಿಸಲಾಯಿತು.

22. **ಕೊಪ್ಪಳ:-** 2013-14ನೇ ಸಾಲಿಗೆ ನಿಗಧಿಪಡಿಸಿರುವ ಗುರಿಯನ್ನು ಪರಿಶೀಲಿಸಿ ಗುರಿಯನ್ನು ಪರಿಷ್ಕೃತ ಮಾಡುವಂತೆ ಸೂಚಿಸಿದರು. 2012-13ನೇ ಸಾಲಿಗೆ ನಿಗಧಿಪಡಿಸಿರುವ ಗುರಿಗೆ ಅನುಗುಣವಾಗಿ ಪ್ರಗತಿಯನ್ನು ಫೆಬ್ರವರಿ-13 ಮತ್ತು ಮಾರ್ಚ್-13ರರೊಳಗಾಗಿ ಸಾಧಿಸುವುದಾಗಿ ಜಿಲ್ಲಾ ನೋಡಲ್ ಅಧಿಕಾರಿಯವರು ಸಭೆಗೆ ತಿಳಿಸಿದರು ಮತ್ತು ಪ್ರಗತಿ ನಿರೀಕ್ಷಿತ ಮಟ್ಟದಲ್ಲಿಲ್ಲದ ಕಾರಣ ಯಾವುದೇ ಸಮಜಾಯಿಷಿಗೆ ಅವಕಾಶ ನೀಡದೇ 2012-13ರ ಗುರಿಯನ್ನು ಸಾಧಿಸುವುದು ತಪ್ಪಿದಲ್ಲಿ ಜಿಲ್ಲಾ ನೋಡಲ್ ಅಧಿಕಾರಿಗಳು ಮತ್ತು ಸಮಾಲೋಚಕರೇ ನೇರ ಹೊಣೆಗಾರರಾಗುತ್ತಾರೆಂದು ತಿಳಿಸಿದರು. 2013-14ನೇ ಸಾಲಿನ ಎಐಪಿಯನ್ನು ಪರಿಷ್ಕರಿಸಿ ಸಲ್ಲಿಸಲು ಸೂಚಿಸಿದರು.

23. **ಮಂಡ್ಯ:** 2013-14ನೇ ಸಾಲಿನ ಎಐಪಿಯನ್ನು ಪರಿಶೀಲಿಸಿ ನಿಗಧಿಪಡಿಸಿರುವ ಗುರಿಯನ್ನು ಸಾಧಿಸುವಂತೆ ತಿಳಿಸಿದರು. ಜಿಲ್ಲೆಯಲ್ಲಿ ಬಿಡುಗಡೆಯಾದ ಅನುದಾನಲ್ಲಿ ವೆಚ್ಚ ಮಾಡಿ ಇನ್ನೂ ರೂ.823.46 ಲಕ್ಷಗಳು ಬಾಕಿ ಉಳಿದಿರುವುದರಿಂದ 2013-14ನೇ ಸಾಲಿಗೆ ಯಾವುದೇ ಅನುದಾನವನ್ನು ಬಿಡುಗಡೆ ಮಾಡುವುದಿಲ್ಲವೆಂದು ತಿಳಿಸಿದರು. ಆದಾಗ್ಯೂ ಈ ಉಳಿಕೆಯಲ್ಲಿ ಹೆಚ್ಚುವರಿಯಾಗಿ ವೆಚ್ಚವೇನಾದರೂ ಆಗಿದ್ದರೆ ಜಿಲ್ಲೆಗೆ ಹೋದ ನಂತರ ಕೇಂದ್ರ ಕಛೇರಿಗೆ ಮಾಹಿತಿಯನ್ನು ನೀಡುವಂತೆ ತಿಳಿಸಿದರು. 2011-12ನೇ ಸಾಲಿನ ಹಣಬಳಕೆ ಪ್ರಮಾಣ ಪತ್ರವನ್ನು ಪರಿಷ್ಕೃತ ಮಾಡಿ ತಂದಿರುವುದಾಗಿ ಜಿಲ್ಲೆಯವರು ತಿಳಿಸಿದರು.

24. **ಮಂಗಳೂರು (ದಕ್ಷಿಣ ಕನ್ನಡ):-** 2013-14ನೇ ಸಾಲಿನಲ್ಲಿ ಯಾವುದೇ ವೈಯಕ್ತಿಕ ಶೌಚಾಲಯದ ಗುರಿಯನ್ನು ಹೊಂದಿರುವುದಿಲ್ಲ ಹಾಗೂ ಪಿಐಪಿಯನ್ನು ಮಾಡಿರುವುದಾಗಿ ತಿಳಿಸಿದರು. ಬೇಸ್‌ಲೈನ್ ಸರ್ವೆ ಮಾಡಿದ ನಂತರ ನಿರ್ಧಿಷ್ಠ ಗುರಿಯ ರೂಪ ಸಿಗುವುದರಿಂದ ನಂತರ ಎಐಪಿಯನ್ನು ಪರಿಷ್ಕೃತ ಮಾಡಲು ತಿಳಿಸಿದರು. ದಕ್ಷಿಣ ಕನ್ನಡ ಜಿಲ್ಲೆಯ ಅಧಿಕಾರಿಗಳು ಅನುದಾನ ಬಿಡುಗಡೆ ಮಾಡುವಂತೆ ಅಪರ ನಿರ್ದೇಶಕರನ್ನು ಕೇಳಿದರು.

25. **ರಾಯಚೂರು:-** ಜಿಲ್ಲೆಯಿಂದ ನೋಡಲ್ ಅಧಿಕಾರಿಗಳು ಸಭೆಗೆ ಹಾಜರಾಗದೇ ಇರಲು ಕಾರಣವನ್ನು ಕೇಳಿ ಇನ್ನು ಮುಂದೆ ಈ ರೀತಿ ಆದರೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು. 2013-14ನೇ ಸಾಲಿಗೆ ನಿಗಧಿಪಡಿಸಿರುವ ಗುರಿಯನ್ನು ಪರಿಶೀಲಿಸಿ ಗುರಿಯನ್ನು ಪರಿಷ್ಕೃತ ಮಾಡುವಂತೆ ಸೂಚಿಸಿದರು.

26. **<u>ಶಿವಮೊಗ್ಗ:-</u>** 2013-14ನೇ ಸಾಲಿಗೆ ನಿಗಧಿಪಡಿಸಿರುವ ಗುರಿಯನ್ನು ಪರಿಶೀಲಿಸಿ ಗುರಿಯನ್ನು ಪರಿಷ್ಕೃತ ಮಾಡುವಂತೆ ಹಾಗೂ ಬೇಸ್‌ಲೈನ್ ಸರ್ವೆ ಮಾಡಲು ತಿಳಿಸಿದರು. ಬೇಸ್‌ಲೈನ್ ಸರ್ವೆ ಮಾಡಿದ ಮಾಹಿತಿಯನ್ನು ಸಭೆ ನಡೆದ ಎರಡು ದಿನಗಳೊಳಾಗಿ ಕೇಂದ್ರ ಕಛೇರಿಗೆ ಕಳುಹಿಸಲು ತಿಳಿಸಿದರು.

27. **<u>ತುಮಕೂರು:-</u>** 2013-14ನೇ ಸಾಲಿಗೆ ನಿಗಧಿಪಡಿಸಿರುವ ಗುರಿಯನ್ನು ಪರಿಶೀಲಿಸಿ ಗುರಿಯನ್ನು ಪರಿಷ್ಕರಿಸುವಂತೆ ತಿಳಿಸಿದರು. ಜಿಲ್ಲೆಯಲ್ಲಿ ಬಿಡುಗಡೆಯಾದ ಅನುದಾನದಲ್ಲಿ ವೆಚ್ಚ ಮಾಡಿ ಇನ್ನೂ ರೂ.1255.25 ಲಕ್ಷಗಳು ಬಾಕಿ ಉಳಿದಿರುವುದರಿಂದ 2013-14ನೇ ಸಾಲಿಗೆ ಯಾವುದೇ ಅನುದಾನವನ್ನು ಬಿಡುಗಡೆ ಮಾಡುವುದಿಲ್ಲವೆಂದು ತಿಳಿಸಿದರು.

28. **<u>ಉತ್ತರ ಕನ್ನಡ:-</u>** 2013-14ನೇ ಸಾಲಿಗೆ ನಿಗಧಿಪಡಿಸಿರುವ ಗುರಿಯನ್ನು ಪರಿಶೀಲಿಸಿ ಗುರಿಯನ್ನು ಪರಿಷ್ಕೃತ ಮಾಡುವಂತೆ ತಿಳಿಸಿದರು. ಜಿಲ್ಲೆಯಲ್ಲಿ ಬಿಡುಗಡೆಯಾದ ಅನುದಾನಲ್ಲಿ ವೆಚ್ಚ ಮಾಡಿ ಇನ್ನೂ ರೂ.1974.90 ಲಕ್ಷಗಳು ಬಾಕಿ ಉಳಿದಿರುವುದರಿಂದ 2013-14ನೇ ಸಾಲಿಗೆ ಯಾವುದೇ ಅನುದಾನವನ್ನು ಬಿಡುಗಡೆ ಮಾಡುವುದಿಲ್ಲವೆಂದು ತಿಳಿಸಿದರು. ಆದಾಗ್ಯೂ ಈ ಉಳಿಕೆಯಲ್ಲಿ ಹೆಚ್ಚುವರಿಯಾಗಿ ವೆಚ್ಚವೇನಾದರೂ ಆಗಿದ್ದರೆ ಜಿಲ್ಲೆಗೆ ಹೋದ ನಂತರ ಕೇಂದ್ರ ಕಛೇರಿಗೆ ಮಾಹಿತಿಯನ್ನು ನೀಡುವುದಾಗಿ ತಿಳಿಸಿದರು ಹಾಗೂ ಖರ್ಚಾದ ಮಾಹಿತಿಯನ್ನು ಆನ್‌ಲೈನ್‌ಗೆ ಎಂಟ್ರಿ ಮಾಡಲು ತಿಳಿಸಿದರು.

29. **<u>ಉಡುಪಿ:-</u>** 2013-14ನೇ ಸಾಲಿನ ಎಐಪಿಯನ್ನು ಪರಿಶೀಲಿಸಿ ನಿಗಧಿಪಡಿಸಿರುವ ಗುರಿಯನ್ನು ಸಾಧಿಸುವಂತೆ ತಿಳಿಸಿದರು. ಬೇಸ್‌ಲೈನ್ ಸರ್ವೆಯನ್ನು ಮಾಡಿ ಪಿಐಪಿಯನ್ನು ಪರಿಷ್ಕೃತ ಮಾಡುವಂತೆ ಹಾಗೂ ಆನ್‌ಲೈನ್‌ನಲ್ಲಿ ಜಿಲ್ಲೆಯ ಮಾಹಿತಿಯು ಸರಿಯಾಗಿ ನಮೂದಿಸುತ್ತಿಲ್ಲ. ಆದ್ದರಿಂದ ಇಲ್ಲಿಯವರೆಗೆ ಸಾಧಿಸಿದ ಪ್ರಗತಿ ಹಾಗೂ ವೆಚ್ಚಮಾಡಲಾದ ಅನುದಾನವನ್ನು ಆನ್‌ಲೈನ್‌ನಲ್ಲಿ ನಮೂದಿಸಲು ತಿಳಿಸಿದರು.

30. **<u>ಯಾದಗಿರಿ:-</u>** ಜಿಲ್ಲೆಯ ನೋಡಲ್ ಅಧಿಕಾರಿಗಳು ನಿರ್ದೇಶಕರಿಗೆ ದೂರವಾಣಿ ಮುಖೇನ ಮಾತನಾಡಿ 08.02.2013ರಂದು ಸಭೆಗೆ ಹಾಜರಾಗಲು ಸಾಧ್ಯವಾಗುವುದಿಲ್ಲ ಎಂಬುದಾಗಿ ತಿಳಿಸಿರುತ್ತಾರೆಂದು ಸಭೆಗೆ ಹಾಜರಾದ ಸಮಾಲೋಚಕರು ತಿಳಿಸಿರುತ್ತಾರೆ. 2013-14ನೇ ಸಾಲಿನ ಎಐಪಿಯನ್ನು ಪರಿಶೀಲಿಸಿ ನಿಗಧಿಪಡಿಸಿರುವ ಗುರಿಯನ್ನು ಸಾಧಿಸುವಂತೆ ತಿಳಿಸಿದರು. ಜಿಲ್ಲೆಗೆ 2ನೇ ಕಂತಿನ ಅನುದಾನವನ್ನು ಬಿಡುಗಡೆ ಮಾಡಲು ಶೇ.60% ರಷ್ಟು ಪ್ರಗತಿ ಇದ್ದರೆ ಮಾತ್ರ ಸಾಧ್ಯವೆಂದು ತಿಳಿಸಿದರು.

ಮುಖ್ಯವಾಗಿ ಜಿಲ್ಲೆಗಳಿಂದ ಬಂದಿರುವ ಹಣಬಳಕೆ ಪ್ರಮಾಣ ಪತ್ರದಲ್ಲಿ ತುಂಬಾ ವ್ಯತ್ಯಾಗಳಿರುವುದರಿಂದ ಕೇಂದ್ರ ಸರ್ಕಾರಕ್ಕೆ ಸಲ್ಲಿಸಲು ಸಾಧ್ಯವಾಗುತ್ತಿಲ್ಲ. ಆದ್ದರಿಂದ ಹಣಬಳಕೆ ಪ್ರಮಾಣ ಪತ್ರದಲ್ಲಿ ನೀಡಿರುವ ವ್ಯತ್ಯಾಸಗಳನ್ನು ಸರಿಪಡಿಸಿ ಸಲ್ಲಿಸಲು ತಿಳಿಸಿದರು.

ಅಂತಿಮವಾಗಿ ಅಪರ ನಿರ್ದೇಶಕರು ಸಭೆಗೆ ಹಾಜರಾಗಿದ್ದ ಎಲ್ಲಾ ಅಧಿಕಾರಿಗಳು ಮತ್ತು ಸಮಾಲೋಚಕರಿಗೆ ವಂದನಾರ್ಪಣೆಯನ್ನು ಸೂಚಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.

19.02.2013

**(ಕೆ.ಎಲ್.ಲೋಕನಾಥ)**

ಅಪರ ನಿರ್ದೇಶಕರು (ನೀ&ನೈ)

ರಾಜ್ಯ ನೀರು ಮತ್ತು ನೈರ್ಮಲ್ಯ ಮಿಷನ್

ಗ್ರಾ.ಅ & ಪಂ.ರಾ.ಇಲಾಖೆ